# ಹಳಿಯಾಳದ ವಿಡಿಐಟಿ ತಂಡಕ್ಕೆ ಜಯ

ಲಕ್ಷ್ಮೇಶ್ವರ: ಪಟ್ಟಣದ ಶ್ರೀಮತಿ ಕಮಲಾ ಮತ್ತು ಶ್ರೀವೆಂಕಪ್ಪ ಎಂ.ಅಗಡಿ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಆಯೋಜಿಸಿದ್ದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ವಲಯ ಮಟ್ಟದ ಮಹಿಳೆಯರ ಥ್ರೋಬಾಲ್ ಪಂದ್ಯಾವಳಿಯಲ್ಲಿ ಹಳಿಯಾಳದ ವಿಡಿಐಟಿ ಕಾಲೇಜ್ ತಂಡವು ಜಯಶಾಲಿಯಾಯಿತು. ಅಂತಿಮ ಹಣಾಹಣಿಯಲ್ಲಿ ರಾಣೆಬೆನ್ನೂರು ಎಸ್‌ಟಿಜೆಐಟಿ ಕಾಲೇಜು ತಂಡವನ್ನು ಸೋಲಿಸಿ ಟ್ರೋಫಿ ತನ್ನದಾಗಿಸಿಕೊಂಡಿತು. ರಾಜ್ಯದ ಪ್ರತಿಷ್ಠಿತ ಕಾಲೇಜಿನ 10 ತಂಡಗಳು ಪಂದ್ಯಾವಳಿಯಲ್ಲಿ ಪಾಲ್ಗೊಂಡಿದ್ದವು.

ಪ.ಪೂ. ಕಾಲೇಜ್ ಪ್ರಾಚಾರ್ಯ ಡಾ. ಎನ್. ಹಯವದನ, ದೈಹಿಕ ಶಿಕ್ಷಣ ನಿರ್ದೇಶಕ ಪ್ರೊ. ಎಸ್.ಎಫ್. ಕೊಡ್ಲಿ, ಪ್ರೊ. ಗದಿಗೆಪ್ಪ ಯಳ್ಳೂರ, ಪ್ರೊ. ಪ್ರವೀಣ, ಪ್ರೊ. ಎಸ್.ಎಂ. ಪಾಟೀಲ, ಎಂ.ಐ. ಕಣಕೆ, ಷಣ್ಮುಖ ಜಿ., ರಮೇಶ ಕೊಪ್ಪದ, ಯಲ್ಲಪ್ಪ ಜೆ, ರಮೇಶ ರಡ್ಡಿ, ಇತರರಿದ್ದರು. ರಾಣೆಬೆನ್ನೂರು ಎಸ್‌ಟಿಜೆಐಟಿ ಕಾಲೇಜು ತಂಡ ದ್ವಿತಿಯ ಸ್ಥಾನ, ಲಕ್ಷ್ಮೇಶ್ವರದ ಎಸ್‌ಕೆಎಸ್‌ವಿಎಂಎಸಿಇಟಿ ಕಾಲೇಜು ತಂಡ ತೃತೀಯ ಸ್ಥಾನ ಪಡೆದುಕೊಂಡವು.



ಲಕ್ಷ್ಮೇಶ್ವರದ ಶ್ರೀಮತಿ ಕಮಲಾ ಮತ್ತು ಶ್ರೀವೆಂಕಪ್ಪ ಎಂ. ಅಗಡಿ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ವಲಯ ಮಟ್ಟದ ಮಹಿಳೆಯರ ಥ್ರೋಬಾಲ್ ಪಂದ್ಯಾವಳಿಯಲ್ಲಿ ಗೆದ್ದ ಹಳಿಯಾಳದ ವಿಡಿಐಟಿ ಕಾಲೇಜ್ ತಂಡಕ್ಕೆ ಟ್ರೋಫಿ ವಿತರಿಸಲಾಯಿತು. ಪ್ರಾಚಾರ್ಯ ಡಾ. ಪರಶುರಾಮ ಬಾರಕಿ, ಪ್ರೊ.ಎಸ್.ಎಫ್.ಕೊಡ್ಲಿ ಇದ್ದರು.

# ಪ್ರಥಮ ಸ್ಥಾನ



ಧಾರವಾಡ, ಫೆ14: ವಿ ತಾ ವಿ ಬೆಳಗಾವಿಯ ವಿಭಾಗ ಮಟ್ಟದ ಅಂತರ್ ಕಾಲೇಜುಗಳ ಮಹಿಳಾ ಥ್ರೋ ಬಾಲ್ ಪಂದ್ಯಾವಳಿಯಲ್ಲಿ ವಿಡಿಐಟಿ ಹಳಿಯಾಳ ತಂಡ ಪ್ರಥಮ ಸ್ಥಾನ ಪಡೆದಿದೆ.

ಲಕ್ಷ್ಮೇಶ್ವರದ ಎಸ್ ಕೆ ಎಸ್ ವಿ ಎಂ ಎ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಈ ಪಂದ್ಯಾವಳಿಯಲ್ಲಿ ವಿಡಿಐಟಿಯ ಮಹಿಳಾ ಥ್ರೋ ಬಾಲ್ ತಂಡವು ಎಸ್ ಟಿ ಜೆ ಐ ಟಿ ರಾಣೇಬೆನ್ನೂರು ತಂಡವನ್ನು ಸೋಲಿಸಿ ಪ್ರಥಮ ಸ್ಥಾನ ಪಡೆಯಿತು.

ಕ್ವೀನಿ ಎಫ್, ದಿವ್ಯಾ ಎನ್ , ಸಾಕ್ಷಿ ಡಿ, ಪ್ರಿಯಾ ಎಚ್, ಪೂರ್ವಿ ವಿ, ಅನುಷಾ ಜಿ, ಜಾನ್ಹವಿ ಎಂ. ಸೋನಿಯಾ ಸಿ, ಸಾಹಿತ್ಯ ಎಸ್, ಸಹನಾ ಎಸ್, ಮಮತಾ ಎಲ್. ಶ್ರೀ ಗೌರಿ ಜೆ ಮಹಾವಿದ್ಯಾಲಯದ ತಂಡವನ್ನು ಪ್ರತಿನಿಧಿಸಿದ್ದರು. ಮಹಾವಿದ್ಯಾಲಯದ ವಿದ್ಯಾರ್ಥಿನಿಯರ ಈ ತಂಡವು ಮೈಸೂರಿನಲ್ಲಿ ಫೆಬ್ರುವರಿ 16 ಮತ್ತು 17ರಂದು ನಡೆಯಲಿರುವ ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದೆ.

---

# ಥ್ರೋ ಬಾಲ್: ವಿಡಿಐಟಿ ವಿದ್ಯಾರ್ಥಿನಿಯರ ಸಾಧನೆ

**ಹಳಿಯಾಳ:** ವಿತಾವಿ ಬೆಳಗಾವಿಯ ವಿಭಾಗ ಮಟ್ಟದ ಅಂತರ್ ಕಾಲೇಜುಗಳ ಮಹಿಳಾ ಥ್ರೋ ಬಾಲ್ ಪಂದ್ಯಾವಳಿಯಲ್ಲಿ ವಿಡಿಐಟಿ ಹಳಿಯಾಳ ತಂಡ ಪ್ರಥಮ ಸ್ಥಾನ ಪಡೆದಿದೆ.

ಲಕ್ಷ್ಮೇಶ್ವರದ ಎಸ್ ಕೆಎಸ್ ವಿಎಂಎ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಫೆ.13 ರಂದು ನಡೆದ ಈ ಪಂದ್ಯಾವಳಿಯಲ್ಲಿ ವಿಡಿಐಟಿಯ ಮಹಿಳಾ ಥ್ರೋ ಬಾಲ್ ತಂಡವು ಎಸ್‌ಟಿ ಜೆಐಟಿ ರಾಣೇಬೆನ್ನೂರು ತಂಡವನ್ನು ಸೋಲಿಸಿ ಪ್ರಥಮ ಸ್ಥಾನ ಪಡೆಯಿತು.

ಕ್ವೀನಿ ಎಫ್, ದಿವ್ಯಾ ಎನ್ , ಸಾಕ್ಷಿ ಡಿ, ಪ್ರಿಯಾ ಎಚ್, ಪೂರ್ವಿ ವಿ, ಅನುಷಾ ಜಿ, ಜಾನ್ಹವಿ ಎಂ. ಸೋನಿಯಾ ಸಿ, ಸಾಹಿತ್ಯ ಎಸ್, ಸಹನಾ ಎಸ್, ಮಮತಾ ಎಲ್, ಶ್ರೀ ಗೌರಿ ಜೆ ಮಹಾವಿದ್ಯಾಲಯದ ತಂಡವನ್ನು ಪ್ರತಿನಿಧಿಸಿದ್ದರು. ಮಹಾವಿದ್ಯಾಲಯದ ವಿದ್ಯಾರ್ಥಿನಿಯರ ಈ ತಂಡವು ಮೈಸೂರಿನಲ್ಲಿ ಫೆಬ್ರುವರಿ 16 ಮತ್ತು 17ರಂದು ನಡೆಯಲಿರುವ ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದೆ.

ವಿದ್ಯಾರ್ಥಿನಿಯರ ಈ ಸಾಧನೆಗೆ ಆಡಳಿತ ಮಂಡಳಿಯ ಅಧ್ಯಕ್ಷ ವಿನಾಯಕ ಲೋಕುರ್, ಪ್ರಾಚಾರ್ಯ ಡಾ. ವಿ. ಎ. ಕುಲಕರ್ಣಿ, ದೈಹಿಕ ನಿರ್ದೇಶಕ ಜಿ. ಎಸ್. ಯಳ್ಳೂರ್ ಹಾಗೂ ಎಲ್ಲ ಸಿಬ್ಬಂದಿಗಳು ಸಂತಸ ವ್ಯಕ್ತಪಡಿಸಿದ್ದಾರೆ.

